## ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಶೋರಾಪುರ.

## ಸಿ.ಸಿ. ನಂ.1526/2023

| | | |
|---|---|---|
| ಸಾಕ್ಷಿದಾರರ ಹೆಸರು | ಃ ಮಲ್ಲಮ್ಮ | ಚಾಸಾ ಃ 04 |
| ಗಂಡ ಹೆಸರು | ಃ ಬಲಭೀಮರಾಯ | ಪ್ರಾಸಾ ಃ 05 |
| ವಯಸ್ಸು | ಃ 50 ವರ್ಷ | |
| ವೃತ್ತಿ | ಃ ಒಕ್ಕಲುತನ | |
| ವಾಸ ಸ್ಥಳ | ಃ ಮಂಗಳೂರು | |

**ಸಾಕ್ಷಿಗೆ ಇಂದು ದಿನಾಂಕಃ 29.04.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ**

ಚಾಸಾ-1 ನನ್ನ ತಂಗಿ, ಚಾಸಾ-5 ನನ್ನ ಮೈದುನ, ಆರೋಪಿತರು ನಮ್ಮ ಸಂಬಂಧಿಕರು ಆಗಬೇಕು. ನಮ್ಮ ಹೊಲ ನಮ್ಮ ಊರಿನ ಹಿಂದೆ ಇರುತ್ತದೆ. ಸದರಿ ಜಮೀನಿನಲ್ಲಿ ಹತ್ತಿ ಬೆಳೆ ಬೆಳೆದಿರುತ್ತೇವೆ. ಸುಮಾರು 03 ವರ್ಷಗಳ ಹಿಂದೆ ಸಾಯಂಕಾಲ 6 ಗಂಟೆಗೆ ಆರೋಪಿತರು ಆಡುಗಳು ನಮ್ಮ ಹೊಲದಲ್ಲಿ ಮೇಯುತ್ತಿದ್ದವು. ನಾನು ಮತ್ತು ಚಾಸಾ-1 ರವರು ಸೇರಿ ಆಡುಗಳನ್ನು ಹೊಡೆದುಕೊಂಡು ಆರೋಪಿತರ ಮನೆಯ ಮುಂದೆ ಹೋದೆವು. ಆಗ 1 ನೇ ಆರೋಪಿತಳಿಗೆ ಆಡುಗಳನ್ನು ನಮ್ಮ ಜಮೀನಿನಲ್ಲಿ ಬಿಡಬೇಡ ಎಂದು ಹೇಳಿದೆವು. ಆಗ 1 ನೇ ಆರೋಪಿ ನನಗೆ ಸೂಳೆಯರು ಅಂತ ಬೈದಿರುತ್ತಾರೆ. ಆಗ ಚಾಸಾ-1 ರವರು ನಮ್ಮ ಹೊಲದಲ್ಲಿ ಮೇಯಿ ನಮಗೆ ಯಾಕ ಬೈಯುತ್ತೀದ್ದಿರಿ ಎಂತ ಕೇಳಿದಾಗ, 1 ನೇ ಆರೋಪಿತಳು ಚಾಸಾ-1 ರವರ ಕೂದಲು ಹಿಡಿದು ಎಳೆದಾಡಿ ನೆಲಕ್ಕೆ ಕೆಡವಿರುತ್ತಾಳೆ. ಆಗ 2 ನೇ ಆರೋಪಿತನು ಒಂದು ಬಡಿಗೆಯಿಂದ ಹನಮಂತ ಇವಳ ಬೆನ್ನಿಗೆ ಹೊಡೆದನು. ಆಗ ನಾನು ಮತ್ತು ಚಾಸಾ-5 ರವರು ಜಗಳ ಬಿಡಿಸಿರುತ್ತೇವೆ. ಆಗ ಆರೋಪಿತರು ಈಗ ಬಿಡಿಸಿದಕ್ಕೆ ಉಳಿದಿರಿ ಇಲ್ಲಂದರೆ ಜೀವ ಹೊಡೆಯುತ್ತಿದ್ದೆವು ಎಂದು ಜೀವದ ಬೇದರಿಕೆ ಹಾಕಿರುತ್ತಾರೆ. ಈ ಬಗ್ಗೆ ಚಾಸಾ-1 ರವರು ದೂರನ್ನು ದಾಖಲಿಸಿರುತ್ತಾರೆ. ಈ ಕುರಿತು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಕೃತ್ಯಕ್ಕೆ ಬಳಸಿದ ಬಡಿಯನ್ನು ಗುರುತಿಸುತ್ತೇನೆ ಅದು ಈಗಾಗಲೇ ಎಂ.ಓ 1 ಎಂದು ಗುರುತಿಸಲಾಗಿದೆ. ನ್ಯಾಯಾಲಯದ

ಮುಂದೆ ಇರುವ ಆರೋಪಿತರು ಗುರುತಿಸುತ್ತೇನೆ.

**<u>ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎಂ.ಎಸ್.ಎಂ ವಕೀಲರಿಂದಃ</u>**

ನಾನು ಶಾಲೆ ಕಲಿತ್ತಿರುವುದಿಲ್ಲ. ನಮ್ಮ ಹೊಲ 5 ಎಕರೆ ಇರುತ್ತದೆ. ಚಾಸಾ-1 ರವರ ಹೊಲ 2 ಎಕರೆ ಇರುತ್ತದೆ. ಚಾಸಾ-1 ಹಾಗೂ ನಮ್ಮ ಹೊಲ 2 ಹೊಲಗಳನ್ನು ಬಿಟ್ಟು ಇರುತ್ತವೆ. ನಾನು ಕೂಲಿ ಕೆಲಸಕ್ಕೆ ಹೋಗುತ್ತೇನೆ. ಘಟನೆ ನಡೆದ ದಿನ ನಾವು ಬೇರೆಯವರ ಹೊಲಕ್ಕೆ ಕೂಲಿ ಕೆಲಸಕ್ಕೆ ಹೋಗಿದ್ದೆವು. ಸಾಕ್ಷಿ ಮುಂದುವರೆದು ಬೆಳಿಗ್ಗೆ ಹೋಗಿ ಸಾಯಂಕಾಲ ಬಂದಿರುತ್ತೇವೆ ಎಂದು ನುಡಿಯುತ್ತಾರೆ. ಆ ದಿನ ನಾವು ಸಾಯಂಕಾಲ 5 ಗಂಟೆಗೆ ಮರಳಿ ಮನೆಗೆ ಬಂದಿರುತ್ತೇವೆ. ಆದಾದ ನಂತರ ನಾನು ಎಲ್ಲಿಯೂ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನಮ್ಮ ಹೊಲಕ್ಕೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. 1 ನೇ ಅರೋಪಿ ನಮ್ಮ ಮೇಲೆ ಒಂದು ಪ್ರಕರಣ ದಾಖಲಿಸಿರುತ್ತಾನೆ ಎಂದರೆ ಸರಿ. ನಾನು, ಬಲಭೀಮ, ಗೂಳಪ್ಪ, ದೇವಪ್ಪ ಎಲ್ಲರೂಸೇರಿ ಆರೋಪಿತರ ಮನೆಗೆ ಹೋಗಿ ಜಗಳ ಮಾಡಿ ಹಲ್ಲೇ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಜೂನ ತಿಂಗಳಿನಿಂದ ಹೊಲ ಬಿತ್ತಲು ಪ್ರಾರಂಭ ಮಾಡುತ್ತಾರೆ ಎಂದರೆ ಸರಿ. ಬೇಸಿಗೆ ಕಾಲದಲ್ಲಿ ಜಮೀನು ಖಾಲಿ ಇರುತ್ತದೆ ಎಂದರೆ ಸರಿ. 1 ನೇ ಆರೋಪಿತಳ ಚಿಕ್ಕಮ್ಮನ ಮಗಳನ್ನು ನನ್ನ ಮಗನಿಗೆ ತೆಗೆದುಕೊಳ್ಳಮ ಸಲುವಾಗಿ ಜಗಳವಾಗಿರುತ್ತದೆ ಎಂದರೆ ಸರಿಯಲ್ಲ. ಯಾವ ಕಾರಣಕ್ಕಾಗಿ ಜಗಳವಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಹುಡಗಿಯನ್ನು ತೆಗೆದುಕೊಳ್ಳುವ ಸಲುವಾಗಿ ಜಗಳವಾಗಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಜಮೀನಿನಿಂದ ಆರೋಪಿತರ ಮನೆ ಒಂದು ಕಿ.ಮಿ ಇರುತ್ತದೆ. ಸದರಿ ಜಮೀನಿನಿಂದ ಆರೋಪಿತರ ಮನೆಗೆ ಬರಲು ಅರ್ದ ಗಂಟೆ ಬೇಕಾಗುತ್ತದೆ ಎಂದರೆ ಸರಿ. ಚಾಸಾ-1 ಮತ್ತು ನಾನು ಬೇರೆ ಬೇರೆಯಾಗಿರುತ್ತೇವೆ. ಅವರ ಮನೆ ಮತ್ತು ನಮ್ಮ ಮನೆ 10 ಮನೆಗಳು ಬಿಟ್ಟು ಇರುತ್ತವೆ. ಆ ದಿನ ನಾನು ಕೆಲಸಕ್ಕೆ ಹೋಗಿ ಬಂದ ನಂತರ ನಾನು ಎಲ್ಲಿಯೂ ಹೋಗಿರುವುದಿಲ್ಲ, ಮನೆಯಲ್ಲಿ ಇದ್ದೆನು ಎಂದರೆ ಸರಿಯಲ್ಲ. ಚಾಸಾ-1 ನನ್ನ ತಂಗಿಯಾಗಬೇಕು ಆಕೆಯ ಮಾಡು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮೇಲೆ ಪ್ರಕರಣ ಮಾಡಿದ್ದಕ್ಕೆ ನಾನು ಚಾಸಾ-1 ರವರ ಮುಖಾಂತರ ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ಕೈಯಿಂದ ಮತ್ತು ಬಡಿಗೆಯಿಂದ ಹೊಡಿಬಡಿ ಮಾಡಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದು ಜೀವಬೇದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

ನಂತರ ರಾಜೀ ಆಗಬೇಕೆನ್ನುವ ಉದ್ದೇಶದಿಂದ ಈ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** ಃ ಇಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.